Y 2



## ರೈತ ತೀರ್ಪು

ಮೈಸೂರಿನ ಪತ್ರಕರ್ತರ ಭವನದಲ್ಲಿ 'ರೈತ ತೀರ್ಪು' ವರದಿಯ ಪುಸ್ತಕವನ್ನು ರೈತ ಮುಖಂಡ ಕುರುಬೂರು ಶಾಂತ ಕುಮಾರ್ ಹಾಗೂ ಸಾವಯವ ಕೃಷಿಕ ಸಂತೋಷ ಕೌಲಗಿ ಸೋಮವಾರ ಬಿಡುಗಡೆ ಮಾಡಿದರು.

ಪ್ರಜಾವಾಣಿ 16/11/10

# 'ರೈತ ತೀರ್ಪು' ಬಿಡುಗಡೆ

ಮೈಸೂರು: ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣಕ್ಕಾಗಿ (ಆದರ್ಶ) ನಡೆದ ಪ್ರಕ್ರಿಯೆಯ ವರದಿ ಯನ್ನು ಒಳಗೊಂಡಿರುವ 'ರೈತ ತೀರ್ಪು' ಪುಸ್ತಕವನ್ನು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತ ಕುಮಾರ್ ಹಾಗೂ ಸಾವಯವ ಕೃಷಿಕ ಸಂತೋಷ ಕೌಲಗಿ ಸೋಮವಾರ ಇಲ್ಲಿ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕುರುಬೂರು ಶಾಂತಕುಮಾರ್, 'ರೈತ ತೀರ್ಪು' ವಿಶ್ವದಲ್ಲಿಯೇ ಮೊದಲ ಬಾರಿಗೆ ಸಣ್ಣ ಮತ್ತು ಸಾಮಾನ್ಯ ರೈತರು ಪ್ರಸ್ತುತದಲ್ಲಿ ನಡೆಯುತ್ತಿರುವ ಕೃಷಿ ಸಂಶೋಧನೆಯ ಮಾದರಿಗಳನ್ನು ಪ್ರಶ್ನಿಸಿ, ಐತಿಹಾಸಿಕ ತೀರ್ಪನ್ನು ನೀಡಿದ್ದಾರೆ. ಆ ತೀರ್ಪನ್ನು ಒಳಗೊಂಡ ವರದಿಯನ್ನೇ ಇದೀಗ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಮಹಿಳೆಯರು, ಬುಡಕಟ್ಟು ಜನರು, ಸಣ್ಣ ಹಿಡುವಳಿದಾರರು ಮತ್ತು ದಲಿತ ಕೃಷಿಕರನ್ನು ಒಳಗೊಂಡ ನ್ಯಾಯ ಮಂಡಳಿ ಸದಸ್ಯರು, 12 ಜನ ಹೆಸರಾಂತ ಕೃಷಿ ವಿಜ್ಞಾನಿಗಳು, ಸಂಶೋಧಕರು, ಸಮಾಜಶಾಸ್ತ್ರಜ್ಞರು, ಗ್ರಾಹಕ ಚಳವಳಿ ನೇತಾರರು, ದನಗಾಹಿಗಳು ಮತ್ತು ಪರಿಸರವಾದಿಗಳ ವಾದಗಳನ್ನು ಆಲಿಸಿ, ಸದ್ಯ ನಡೆಯುತ್ತಿರುವ ಕೃಷಿ ಸಂಶೋಧನೆಯ ದಿಕ್ಕು ದೆಸೆಯ ಬಗ್ಗೆ ಚರ್ಚಿಸಿದಾಗ ಹೊರಬಂದ ವರದಿಯೇ 'ರೈತ ತೀರ್ಪು' ಎಂದರು.

ಆದರ್ಶ ದಕ್ಷಿಣ ಏಷಿಯಾ ಸಂಚಾಲಕ ಪಿ.ವಿ.ಸತೀಶ್ ಮಾತನಾಡಿ, '2009ರ ಡಿಸೆಂಬರ್‌ನಲ್ಲಿ ಈ ಪ್ರಕ್ರಿಯೆ ಆರಂಭವಾಗಿತ್ತು. ಕ್ಲಿಷ್ಟವೆಂದೇ ಬಿಂಬಿಸಲಾಗಿರುವ ಕೃಷಿ ಸಂಶೋಧನೆಗೆ ಧ್ವನಿವಂಚಿತ ಕೃಷಿಕರು ಹೇಗೆ ಹೊಸ ರೂಪ ನೀಡಬಲ್ಲರು ಎಂಬುದನ್ನು ಗಮನದಲ್ಲಿಟ್ಟುಕೊಂಡು ಈ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು' ಎಂದು ತಿಳಿಸಿದರು.

'ಪ್ರತಿಯೊಬ್ಬ ರೈತನೂ ಕೃಷಿಯನ್ನು ಪೂರ್ಣ ದೃಷ್ಟಿಯಿಂದ ನೋಡಬಲ್ಲ ವಿಜ್ಞಾನಿಯಾಗಿದ್ದಾನೆ. ಆದ್ದರಿಂದ ಕೃಷಿ ಸಂಶೋಧನೆ ರೈತನ ನಿಯಂತ್ರಣದಲ್ಲೇ ಇರಬೇಕು. ಆದರೆ, ವಿಜ್ಞಾನಿಗಳು ಕೃಷಿಯನ್ನು ವಿಘಟಿತಗೊಳಿಸುತ್ತಿದ್ದು, ಅತ್ಯಂತ ಅಪಾಯಕಾರಿಯಾಗಿದೆ' ಎಂದರು.

'ರೈತ ತೀರ್ಪು' ವರದಿಯನ್ನು ಸಂಗ್ರಹಿಸಿ ಸಂಪಾದಿಸಿರುವ ಸಂತೋಷ ಕೌಲಗಿ ಹಾಗೂ ಆದರ್ಶದ ಸಂಚಾಲಕ ಕೆ.ಎನ್.ರಾಮಚಂದ್ರ ಮಾತನಾಡಿದರು.

Y

2



## ರೈತ ತೀರ್ಪು

ಮೈಸೂರಿನ ಪತ್ರಕರ್ತರ ಭವನದಲ್ಲಿ 'ರೈತ ತೀರ್ಪು' ವರದಿಯ ಪುಸ್ತಕವನ್ನು ರೈತ ಮುಖಂಡ ಕುರುಬೂರು ಶಾಂತ ಕುಮಾರ್ ಹಾಗೂ ಸಾವಯವ ಕೃಷಿಕ ಸಂತೋಷ ಕೌಲಗಿ ಸೋಮವಾರ ಬಿಡುಗಡೆ ಮಾಡಿದರು.

ಪ್ರಜಾವಾಣಿ 16/11/10

# 'ರೈತ ತೀರ್ಪು' ಬಿಡುಗಡೆ

ಮೈಸೂರು: ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣಕ್ಕಾಗಿ (ಆದರ್ಶ) ನಡೆದ ಪ್ರಕ್ರಿಯೆಯ ವರದಿಯನ್ನು ಒಳಗೊಂಡಿರುವ 'ರೈತ ತೀರ್ಪು' ಪುಸ್ತಕವನ್ನು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತ ಕುಮಾರ್ ಹಾಗೂ ಸಾವಯವ ಕೃಷಿಕ ಸಂತೋಷ ಕೌಲಗಿ ಸೋಮವಾರ ಇಲ್ಲಿ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕುರುಬೂರು ಶಾಂತಕುಮಾರ್, 'ರೈತ ತೀರ್ಪು' ವಿಶ್ವದಲ್ಲಿಯೇ ಮೊದಲ ಬಾರಿಗೆ ಸಣ್ಣ ಮತ್ತು ಸಾಮಾನ್ಯ ರೈತರು ಪ್ರಸ್ತುತದಲ್ಲಿ ನಡೆಯುತ್ತಿರುವ ಕೃಷಿ ಸಂಶೋಧನೆಯ ಮಾದರಿಗಳನ್ನು ಪ್ರಶ್ನಿಸಿ, ಐತಿಹಾಸಿಕ ತೀರ್ಪನ್ನು ನೀಡಿದ್ದಾರೆ. ಆ ತೀರ್ಪನ್ನು ಒಳಗೊಂಡ ವರದಿಯನ್ನೇ ಇದೀಗ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಮಹಿಳೆಯರು, ಬುಡಕಟ್ಟು ಜನರು, ಸಣ್ಣ ಹಿಡುವಳಿದಾರರು ಮತ್ತು ದಲಿತ ಕೃಷಿಕರನ್ನು ಒಳಗೊಂಡ ನ್ಯಾಯ ಮಂಡಳಿ ಸದಸ್ಯರು, 12 ಜನ ಹೆಸರಾಂತ ಕೃಷಿ ವಿಜ್ಞಾನಿಗಳು, ಸಂಶೋಧಕರು, ಸಮಾಜಶಾಸ್ತ್ರಜ್ಞರು, ಗ್ರಾಹಕ ಚಳವಳಿ ನೇತಾರರು, ದನಗಾಹಿಗಳು ಮತ್ತು ಪರಿಸರವಾದಿಗಳ ವಾದಗಳನ್ನು ಆಲಿಸಿ, ಸದ್ಯ ನಡೆಯುತ್ತಿರುವ ಕೃಷಿ ಸಂಶೋಧನೆಯ ದಿಕ್ಕು ದೆಸೆಯ ಬಗ್ಗೆ ಚರ್ಚಿಸಿದಾಗ ಹೊರಬಂದ ವರದಿಯೇ 'ರೈತ ತೀರ್ಪು' ಎಂದರು.

ಆದರ್ಶ ದಕ್ಷಿಣ ಏಷಿಯಾ ಸಂಚಾಲಕ ಪಿ.ವಿ.ಸತೀಶ್ ಮಾತನಾಡಿ, '2009ರ ಡಿಸೆಂಬರ್‌ನಲ್ಲಿ ಈ ಪ್ರಕ್ರಿಯೆ ಆರಂಭವಾಗಿತ್ತು. ಕ್ಲಿಷ್ಟವೆಂದೇ ಬಿಂಬಿಸಲಾಗಿರುವ ಕೃಷಿ ಸಂಶೋಧನೆಗೆ ಧ್ವನಿವಂಚಿತ ಕೃಷಿಕರು ಹೇಗೆ ಹೊಸ ರೂಪ ನೀಡಬಲ್ಲರು ಎಂಬುದನ್ನು ಗಮನದಲ್ಲಿಟ್ಟುಕೊಂಡು ಈ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು' ಎಂದು ತಿಳಿಸಿದರು.

'ಪ್ರತಿಯೊಬ್ಬ ರೈತನೂ ಕೃಷಿಯನ್ನು ಪೂರ್ಣ ದೃಷ್ಟಿಯಿಂದ ನೋಡಬಲ್ಲ ವಿಜ್ಞಾನಿಯಾಗಿದ್ದಾನೆ. ಆದ್ದರಿಂದ ಕೃಷಿ ಸಂಶೋಧನೆ ರೈತನ ನಿಯಂತ್ರಣದಲ್ಲೇ ಇರಬೇಕು. ಆದರೆ, ವಿಜ್ಞಾನಿಗಳು ಕೃಷಿಯನ್ನು ವಿಘಟಿತಗೊಳಿಸುತ್ತಿದ್ದು, ಅತ್ಯಂತ ಅಪಾಯಕಾರಿಯಾಗಿದೆ' ಎಂದರು.

'ರೈತ ತೀರ್ಪು' ವರದಿಯನ್ನು ಸಂಗ್ರಹಿಸಿ ಸಂಪಾದಿಸಿರುವ ಸಂತೋಷ ಕೌಲಗಿ ಹಾಗೂ ಆದರ್ಶದ ಸಂಚಾಲಕ ಕೆ.ಎನ್.ರಾಮಚಂದ್ರ ಮಾತನಾಡಿದರು.